
## ದಿಲ್



**ಚಿತ್ರ: ಎನ್‌ಕ್ಲೇವ್** (Enklava)
ನಿರ್ದೇಶನ: **ರಾಡೊವನೊವಿಕ್**
ಸಂಗೀತ: **ಎಲೆನಿ ಕರ್ೈಂದ್ರೊ ಮತ್ತು ಐರೆನಾ ಪೊಪೊವಿ**
ಛಾಯಾಗ್ರಹಣ: **ಆ್ಯಕ್ಸೆಲ್ ಷೆಪಟ್**
ಅವಧಿ: 92 **ನಿಮಿಷ**

ಯುದ್ಧದಿಂದಾಗುವ ಹಿಂಸೆ, ಅದರ ಕುರಿತ ವಿರೋಧವನ್ನು ಸೈದ್ಧಾಂತಿಕವಾಗಿ ಪ್ರತಿಪಾದಿಸುವ ಇಲ್ಲವೇ ಅದನ್ನು ಬೌದ್ಧಿಕ ಕಸರತ್ತನ್ನಾಗಿಸುವ ಪ್ರಯತ್ನ ನಿರ್ದೇಶಕ ರಾಡೊವನೊವಿಕ್‌ನ ಸಿನಿಮಾ 'ಎನ್‌ಕ್ಲೇವ್'ನಲ್ಲಿ ಕಾಣಿಸುವುದಿಲ್ಲ. ಆದ್ದರಿಂದಲೇ ಈ ಸಿನಿಮಾ ಅತ್ಯಂತ ಮಹತ್ವದ್ದಾಗಿದೆ. ಅದರ ಮಾನವೀಯ ಆಯಾಮಗಳನ್ನು ಈ ಸಿನಿಮಾ ತೋರಿಸಿಕೊಟ್ಟಿದೆ. ಇಲ್ಲಿ ಕತೆ ಇಲ್ಲ, ಇತಿಹಾಸವಿದೆ.

**ಹೊ**ರಗೆ ನಡೆಯುವ ಯುದ್ಧ ನಮ್ಮ ಅಂತರಂಗದ ಹಿಂಸೆಯದೇ ನಿರ್ಣಾಯಕ ಹಣಾಹಣಿ. ಸಹಿಷ್ಣುತೆ ಭಾವ ಕಳಕೊಂಡ ಅಶಾಂತ ಮನಸುಗಳಿಂದ ಹುಟ್ಟಿದ ಹಿಂಸೆಗೆ ಪ್ರತಿ ಹಿಂಸೆ ಎಂದಾಗ ಯಾವುದನ್ನು ನಾವು ಉಳಿಸ ಹೊರಡುತ್ತೇವೋ ಅದನ್ನೇ ಕಳಕೊಳ್ಳುವ ದುರಂತಕ್ಕೂ ಬಂದು ನಿಲ್ಲುತ್ತೇವೆ. ಇರುವುದೊಂದೇ ನೆಲ. ಬೇಲಿಗಳೆಷ್ಟು?...

ಧರ್ಮದ ಕರ್ಮಠ ಮನಸುಗಳ ಮತಾಂಧತೆಯನ್ನಾಗಲಿ, ದೇಶಭಕ್ತಿಯ ಅಮಲನ್ನಾಗಲಿ ಅಥವಾ ಸಹಬಾಳ್ವೆ ಸಹಿಸದ ಮನಸುಗಳ ಅಸಹಿಷ್ಣು ಧೋರಣೆಯನ್ನಾಗಲಿ ಯಾವುದನ್ನೂ ಪ್ರಶ್ನಿಸುವ ಹಾಗೆಯೇ ಇಲ್ಲ. ಪ್ರಶ್ನಿಸುವ ಪ್ರತಿ ಉಸಿರು ಕಟ್ಟಿ ಹಾಕುವ ಹುಂಬತನ ಅಧಿಕಾರಕ್ಕೆ, ಸೇನೆಗಿದೆ. ಒಟ್ಟಾರೆ ಆಧುನಿಕ ರಾಜಕೀಯ ಮತ್ತು ಧರ್ಮಗಳ ಕರ್ಮಠತನ ಮನುಷ್ಯ ಬದುಕಿನ ಮೂಲ ನೆಲೆಗಳನ್ನೇ ನಾಶ ಮಾಡಹೊರಟಿದೆ. ಸಿರಿಯಾ, ಫಲಿಸ್ತಾನ್, ಕಾಶ್ಮೀರ, ಕೊಸೊವೊ, ಅಲ್ಬೇನಿಯಾ, ಸೈಬೀರಿಯಾ, ಮಧ್ಯಪ್ರಾಚ್ಯ ರಾಷ್ಟ್ರಗಳು... ಇಲ್ಲೆಲ್ಲ ನಡೆವ ಹಿಂಸೆಗಳ ಅಂತಿಮ ಗುರಿ ಏನು? ಅದು ಧರ್ಮವನ್ನು ಗೆಲ್ಲಿಸುವುದಕ್ಕೋ, ರಾಜಕೀಯ ಮಹತ್ವಾಕಾಂಕ್ಷೆಗೋ.. ಆದರೆ